
ಹೀಗೆ ಚಂಪಾ ಅವರು ಮುಂಚಲನೆ, ಹಿಂಚಲನೆಗಳಲ್ಲಿ ಒಂದು ರೀತಿಯ ರಾಜಕೀಯ 'ತಪ್ತತೆ'ಯನ್ನು ಅನುಭವಿಸುತ್ತಿದ್ದರು ಎಂದು ನನಗನಿಸುತ್ತದೆ.

'ತಪ್ತತೆ'ಯು ಚಂಪಾ ಅವರ ಸಂಚಾರಿ ಭಾವವಾಗಿದ್ದರೆ, 'ಆಪ್ತತೆ'ಯು ಸ್ಥಾಯಿ ಭಾವವಾಗಿತ್ತು. ಹಿರಿ ಕಿರಿಯರೆನ್ನದೆ ಅವರು ಆಪ್ತವಾಗಿ ನಡೆದುಕೊಳ್ಳುತ್ತಿದ್ದ ರೀತಿ ವಿಶೇಷವಾಗಿತ್ತು.

ನನ್ನದೇ ಒಂದು ಉದಾಹರಣೆಯನ್ನು ಇಲ್ಲಿ ಹೇಳಬೇಕು. ಬಂಡಾಯ ಸಾಹಿತ್ಯ ಸಂಘಟನೆಯು ರೂಪುಗೊಂಡಾಗ ಮೂವರು ರಾಜ್ಯ ಸಂಚಾಲಕರೆಂದು ಆಯ್ಕೆಯಾಗಿದ್ದವು. (ನಾನು, ಸಿದ್ಧಲಿಂಗಯ್ಯ ಮತ್ತು ಇಂದೂಧರ ಹೊನ್ನಾಪುರ). ಎರಡನೇ ರಾಜ್ಯ ಸಮ್ಮೇಳನದ ಅನಂತರ ನನ್ನನ್ನು ಪ್ರಧಾನ ಸಂಚಾಲಕನೆಂದು ಆಯ್ಕೆ ಮಾಡಲಾಯಿತು. ಚಂಪಾ ಅವರು ಧಾರವಾಡ ಜಿಲ್ಲೆಯ ಜಿಲ್ಲಾ ಸಂಚಾಲಕರು. ಅವರು ವಯಸ್ಸು ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ನನಗಿಂತ ದೊಡ್ಡವರು, ನಾನು ಚಿಕ್ಕವನು. ಆದರೆ, ಚಂಪಾ ಅವರು ಚಿಕ್ಕವನಾದ ನಾನು ರಾಜ್ಯ ಸಂಚಾಲಕನಾಗಿದ್ದೇನೆಂದು ಯಾವತ್ತೂ ಪರಿತಪಿಸಲಿಲ್ಲ. ನನಗೆ ರಾಜ್ಯ ಪ್ರಧಾನ ಸಂಚಾಲಕನಿಗೆ ತಕ್ಕ ಪ್ರೀತಿ ವಿಶ್ವಾಸ ನೀಡಿ ನಡೆದುಕೊಂಡರು. ಇಲ್ಲಿ 'ತಪ್ತತೆ'ಯ ಲವಲೇಶವೂ ಇರಲಿಲ್ಲ. ಕೇವಲ 'ಆಪ್ತತೆ' ಇತ್ತು. ಇದು ಚಂಪಾ ಅವರ ಸರಳತೆ, ಸಜ್ಜನಿಕೆಗೆ ಸಾಕ್ಷಿಯೂ ಹೌದು.



ಆದರೆ, ತಮಗೆ ಇಷ್ಟವಾಗದ ವಿಚಾರಗಳ ವಿಷಯದಲ್ಲಿ ಚಂಪಾ ಅವರು ಸಜ್ಜನಿಕೆಯ ನೆಪ ಹೂಡಿ ಎಂದೂ ಸುಮ್ಮನಿದ್ದವರಲ್ಲ. ಸ್ಥಾನ ಮತ್ತು ಮಾನ ಒಂದೇ ಎಂದು ತಿಳಿದವರಲ್ಲ. ಸ್ಥಾನಕ್ಕಿಂತ ಮಾನವೇ ಮುಖ್ಯ ಎಂದುಕೊಂಡಿದ್ದವರು. 'ಸ್ಥಾನ'ದ ಮಾನವನ್ನೂ ಕಾಪಾಡಿದರು. ಈ ಮಾತಿಗೆ ಉತ್ತಮ ಉದಾಹರಣೆಯೆಂದರೆ ಶಿವಮೊಗ್ಗದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ. ಆಗ ಚಂಪಾ ಅವರು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಈ ಸಮ್ಮೇಳನದ ರೂವಾರಿಯಾಗಿದ್ದರು. ಸಮ್ಮೇಳನಕ್ಕೆ ಗೌರಿ ಲಂಕೇಶ್, ವಿಠಲ್ ಕಲ್ಲುಳಿ ಮತ್ತೆ ಕೆಲವರನ್ನು ಆಹ್ವಾನಿಸಿದ್ದರು. ಇದಕ್ಕೆ ಸರ್ಕಾರದ ಕೆಲ ಪ್ರತಿನಿಧಿಗಳಿಂದಲೂ ಸಂಘ ಪರಿವಾರದ ವಕ್ತಾರರಿಂದಲೂ ತೀವ್ರ ವಿರೋಧ ಬಂತು. ಇವರನ್ನೆಲ್ಲ ಕರೆಯಬಾರದೆಂದು ಒತ್ತಾಯಿಸಲಾಯಿತು. ಆದರೆ, ಚಂಪಾ ಇದಕ್ಕೆಲ್ಲ ಬಗ್ಗಲಿಲ್ಲ. ಯಾರನ್ನು ಕರೆಯಬೇಕು ಎನ್ನುವುದು ಸಾಹಿತ್ಯ ಪರಿಷತ್ತಿನ ಸ್ವಾತಂತ್ರ್ಯ ಎಂದು